

بسم اللہ الرّحمٰن الرّحیم

# ಅಲ್ಲಾಹನಲ್ಲಿ ಪೂರ್ಣ ಭರವಸೆ ಹೊಂದುವವರಿಗೆ ಇಹ – ಪರ ಅನುಗ್ರಹಗಳು ಲಭಿಸುವುವು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **04-09-2015** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

"ಒಬ್ಬ ಮನುಷ್ಯನಲ್ಲಿ ವಾಸ್ತವಿಕ ತಖ್ವ ಉಂಟಾದರೆ ಅವನಿಗೆ ಇಹಲೋಕದ ಎಲ್ಲ ಅನುಗ್ರಹಗಳು ಸಿಗುವುವು" ಎಂದು ಒಬ್ಬ ಲೌಕಿಕವಾದಿ ಮನುಷ್ಯನೊಂದಿಗೆ ಹೇಳಿದರೆ, ಅವನು ನಿಶ್ಚಯವಾಗಿಯೂ ಹೇಳುವನು– "ಇವುಗಳೆಲ್ಲಾ ನಿರರ್ಥಕ ಮಾತುಗಳಾಗಿವೆ. ಧರ್ಮದ ಹೆಸರಲ್ಲಿ ಜನರನ್ನು ತಮ್ಮ ಸುತ್ತುಮುತ್ತಲೂ ಜಮಾಯಿಸಲು ಹೀಗೆ ಹೇಳಲಾಗುತ್ತದೆ" ಎಂದು ಹೇಳುವನು. ಇಂದಿನ ಕಾಲದಲ್ಲಿ ಧರ್ಮದ ಹೆಸರಿನಲ್ಲಿ ಕೆಲವು ಜನರು ಇಂತಹ ಮಾತುಗಳನ್ನು ಹೇಳುತ್ತಾರೆ ಎಂಬುದು, ಮತ್ತು ಅದರಲ್ಲಿ ಅವರ ಸ್ವಾರ್ಥ ಹಿತಾಶಕ್ತಿ ಇರುತ್ತದೆ ಎನ್ನುವುದು ಸಹ ಸತ್ಯವೇ ಆಗಿದೆ. ಆದರೆ ಇಂತಹ ಜನರು ತಖ್ವವನ್ನು ಹೊಂದಿರುವುದಿಲ್ಲ. ಅವರನ್ನು ಅನುಸರಿಸುವವರಲ್ಲಿಯೂ ತಖ್ವ ಇರುವುದಿಲ್ಲ. ಆದರೆ ಇದಕ್ಕೆದುರಾಗಿ ಪ್ರವಾದಿಗಳು ಮತ್ತು ಅವರು ಸ್ಥಾಪಿಸಿದ ಜಮಾಅತ್ ತಖ್ವದ ಬಗ್ಗೆ ವಾಸ್ತವಿಕ ಜ್ಞಾನ ಗಳಿಸಿರುತ್ತದೆ. ಅವರು ಇಹಲೋಕದಲ್ಲಿ ಜೀವಿಸುತ್ತಿದ್ದೂ ಇಹಲೋಕದಲ್ಲಿ ಕೆಲಸ ಮಾಡುತ್ತಿದ್ದೂ ತಖ್ವವನ್ನು ಅವಲಂಬಿಸುತ್ತಾರೆ. ನನಗೆ ನೂರಾರು ಪತ್ರಗಳು ಬರುತ್ತಾ ಇವೆ. ಅದರಲ್ಲಿ ಹೀಗೆ ಬರೆದಿರುತ್ತಾರೆ: ಅಲ್ಲಾಹನು ನಮ್ಮಲ್ಲೂ ನಮ್ಮ ಮಕ್ಕಳಲ್ಲೂ ತಖ್ವವನ್ನು ಸೃಷ್ಟಿಸಲಿ ಎಂದು. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿ ತಮ್ಮ ಬೈಅತ್ ಪ್ರತಿಜ್ಞೆಗಳನ್ನು ಈಡೇರಿಸುವ ಮನೋಭಾವ ಹೊಂದಿರುವುದರಿಂದ ಅವರಲ್ಲಿ ಇಂತಹ ಅಭಿಲಾಷೆ ಉಂಟಾಗಿದೆ. ಈ ಅಭಿಲಾಷೆ ಅವರು ಅಲ್ಲಾಹನೊಂದಿಗೆ ಸಂಬಂಧ ಸ್ಥಾಪಿಸಿ ಅಲ್ಲಾಹನ ಭಯ ಹೊಂದಿರುವುದರಿಂದಾಗಿದೆ. ಅವರು ಲೋಕದ ಸಾಮಗ್ರಿಗಳ ಬಗ್ಗೆ ನಿರ್ಲಕ್ಷ್ಯತೆ ಹೊಂದಿದ್ದರೂ ಲೌಕಿಕ ಅನುಗ್ರಹಗಳಿಂದ ಅವರು ವಂಚಿತರಾಗಿಲ್ಲ. ಅಲ್ಲಾಹನು ಪ್ರವಾದಿಗಳಿಗೆ ತನ್ನ ಅನುಗ್ರಹಗಳನ್ನು ನೀಡುತ್ತಾನೆ. ಅವರನ್ನು ವಾಸ್ತವಿಕವಾಗಿ ನಂಬಿ ಅವರ ಉಪದೇಶಗಳನ್ನು ಅನುಸರಿಸಿ ನಡೆಯುವವರಿಗೂ ಲೌಕಿಕ ಅನುಗ್ರಹಗಳನ್ನು ನೀಡುತ್ತಾನೆ. ಕೆಲವು ಸಾರಿ ಕೆಲವು ತಾತ್ಕಾಲಿಕ ಸಂಕಷ್ಟಗಳು ತಲೆದೋರಬಹುದು. ಆದರೆ ಅನಂತರ ಅಲ್ಲಾಹನ ಅನುಗ್ರಹ ಉಂಟಾಗುತ್ತದೆ. ಸ್ಥಿತಿಯು ಉತ್ತಮಗೊಳ್ಳುತ್ತದೆ. ಇದೇ ರೀತಿ ಯಾವಾಗಲೂ ಮುತ್ತಖಿ (ತಖ್ವ ಹೊಂದಿದವನು) ಇದ್ದುದರಲ್ಲಿ ತೃಪ್ತನಾಗುವವನಾಗಿರುತ್ತಾನೆ. ಅವನ ಈ ಗುಣದ ಕಾರಣದಿಂದ ಸಾಮಾನ್ಯ ಸಂಕಷ್ಟಗಳನ್ನು ಅವನು ಸಹಿಸುತ್ತಾನೆ. ಅನಂತರ ಅಲ್ಲಾಹನ ಅನುಗ್ರಹ ಉಂಟಾಗುತ್ತದೆ. ಅವನಿಗೆ ಸಿಗುವ ಅನುಗ್ರಹಗಳನ್ನು ಅವನು ಪ್ರಕಟಿಸುತ್ತಲೂ ಇರುತ್ತಾನೆ. ಅವನಿಗೆ ಸ್ವಲ್ಪ ಅನುಗ್ರಹ ದೊರೆತರೂ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುತ್ತಾನೆ. ಅದರ ಅಭ್ಯಾಸ ಮಾಡಿಕೊಳ್ಳುತ್ತಾನೆ. ಮುತ್ತಖಿಯಲ್ಲಿ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುವ ಅಭ್ಯಾಸ ಉಂಟಾದರೆ ಅವನಿಗೆ ಅಲ್ಲಾಹನು ಇನ್ನಷ್ಟು ಹೆಚ್ಚಿಗೆ ಅನುಗ್ರಹಗಳನ್ನು ನೀಡಲು ತೊಡಗುತ್ತಾನೆ. ಈ ಅನುಗ್ರಹಗಳನ್ನು ನೋಡಿ ವಾಸ್ತವಿಕ ಸತ್ಯವಿಶ್ವಾಸಿ ಪುನಃ ತ್ಯಾಗ ಮಾಡಲು ಸಿದ್ಧನಾಗುತ್ತಾನೆ ಮತ್ತು ತ್ಯಾಗ ಮಾಡುತ್ತಾನೆ. ಇಂದಿನ ಕಾಲದಲ್ಲಿ ಈ ವಿಷಯದ ಬಗ್ಗೆ ವಾಸ್ತವಿಕ ಜ್ಞಾನವಿರುವುದು ಅಹ್ಮದಿಯರಾದ ನಮಗೆ ಆಗಿದೆ. ನಮ್ಮ ಮುಂದೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲಘಟ್ಟವೂ ಇದೆ. ಮತ್ತು ಅವರ ಸತ್ಯಸಂಧನಾದ ಸೇವಕ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲಘಟ್ಟವೂ ಇದೆ. ಅವರ ನಡೆವಳಿಕೆಯೂ ಇವೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಈ ವಿಷಯದ ಬಗ್ಗೆ ಒಂದು ಸ್ಥಳದಲ್ಲಿ ಹೀಗೆ ಹೇಳಿದ್ದಾರೆ: "ನೋಡಿರಿ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದ ಜನರು ಎಲ್ಲವನ್ನೂ ಕಿತ್ತುಕೊಂಡರು. ಅದೇ ರೀತಿ ಅವರ ಸಹಾಬರಿಂದಲೂ ಕಿತ್ತುಕೊಂಡರು. ಆದರೆ ಅಲ್ಲಾಹನೊಂದಿಗೆ ಬಾಂಧವ್ಯದ ಎದುರಿಗೆ ಅವರಿಗೆ ಬೇರೆ ಯಾವುದರ ಬಗ್ಗೆಯೂ ಚಿಂತೆಯಿರಲಿಲ್ಲ. ಕೊನೆಗೆ ಅಲ್ಲಾಹನು ಅವರಿಗೆ ಎಲ್ಲವನ್ನೂ ಕೊಟ್ಟನು. ಇದೇ ರೀತಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅಲ್ಲಾಹನ ಪ್ರೀತಿ ಗಳಿಸಲು ಲೌಕಿಕವಾದ ಎಲ್ಲವನ್ನೂ ತ್ಯಜಿಸಿದರು. ಅವರಿಗೆ ಕುಟುಂಬದ ಆಸ್ತಿಯಲ್ಲಿ ಅರ್ಧಪಾಲಿನ ಹಕ್ಕು ಇದ್ದರೂ ಅವರ ನಾದಿನಿ (ಅಣ್ಣನ ಪತ್ನಿ) ಅವರ ಬಗ್ಗೆ ಬಿಟ್ಟಿ ಉಣ್ಣುವವನು ಎಂದು ಗಣಿಸುತ್ತಿದ್ದರು. (ಆಕೆಗೆ ಅನಂತರ ಅಹ್ಮದಿಯತ್ ಸ್ವೀಕರಿಸುವ ಭಾಗ್ಯ ಅಲ್ಲಾಹನು ನೀಡಿದನು). ಆ ಕಾಲದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಬಹಳ ಕಷ್ಟ ಅನುಭವಿಸಿದ್ದರು. ಆದರೆ ಅನಂತರ ಅಲ್ಲಾಹನು ಅವರಿಗೆ ಎಲ್ಲವನ್ನೂ ಕೊಟ್ಟನು." ಇದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಒಂದು ಅರಬಿ ಪದ್ಯದಲ್ಲಿ ಹೀಗೆ ಹೇಳುತ್ತಾರೆ:

**ಲಫಾಝಾತುಲ್ ಮವಾಯಿದ್ ಕಾನ ಉಕ್‌ಲೀ**

**ವ ಸಿರ್‌ತುಲ್ ಯೌಮ ಮಿತ್ ಆಮುಲ್ ಅಹಾಲಿ.**

ಒಂದು ಕಾಲದಲ್ಲಿ ಅನ್ಯರ ಆಹಾರದ ತುಂಡುಗಳು ನನ್ನ ಆಹಾರವಾಗಿತ್ತು. ಈಗ ನಾನು ಸಾವಿರಾರು ಜನರಿಗೆ ಉಣಬಡಿಸುತ್ತಿದ್ದೇನೆ.

ನಾವು ನಮ್ಮ ಜಮಾಅತಿನ ಆರಂಭದ ಕಾಲ ಮತ್ತು ಅನಂತರದ ಕಾಲವನ್ನು ನೋಡುವಾಗ ಅಹ್ಮದಿಯರಾದ ನಮ್ಮ ವಿಶ್ವಾಸ ನಿಶ್ಚಯವಾಗಿಯೂ ವರ್ಧಿಸುತ್ತಿದೆ. ಇದರ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಹೇಳುತ್ತಾರೆ: "ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಜನಿಸಿದಾಗ ಅವರ ತಂದೆ ತಾಯಂದಿರು ಬಹಳ ಸಂತೋಷಪಟ್ಟಿರಬಹುದು. ಆದರೆ ಅನಂತರ ಅವರು ಯುವಕರಾದಾಗ ಅವರಲ್ಲಿ ಲೋಕದ ಬಗ್ಗೆ ನಿರಾಸಕ್ತಿ ತಲೆದೋರಿತು. ಆಗ ಅವರ ತಂದೆಯವರು ಅವರ ಈ ಸ್ಥಿತಿಯನ್ನು ನೋಡಿ ನಿಟ್ಟುಸಿರು ಬಿಡುತ್ತಿದ್ದರು. ನಮ್ಮ ಮಗ ಯಾವ ಕೆಲಸಕ್ಕೂ ಬಾರದವನಾದನಲ್ಲ ಎಂದು ಯೋಚಿಸಿದರು." ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಒಂದು ಘಟನೆ ಹೀಗೆ ವಿವರಿಸುತ್ತಾರೆ– "ಒಬ್ಬ ಸಿಖ್ ನನ್ನೊಡನೆ ಹೀಗೆ ಹೇಳಿದರು: ನಾನು ಮಿರ್ಝಾ ಸಾಹೇಬರ ಬಳಿಗೆ ಹೋಗಿ ಹೇಳಿದೆ: ನಿಮ್ಮ ತಂದೆಯವರು ಬಹಳ ಚಿಂತೆಯಿಂದಿದ್ದಾರೆ. ನನ್ನ ಚಿಕ್ಕ ಮಗ ಏನೂ ಕೆಲಸ ಮಾಡದೆ ತನ್ನ ಅಣ್ಣನಿಂದ ರೊಟ್ಟಿ ಪಡೆದು ಜೀವಿಸಬೇಕಾದೀತಲ್ಲ ಎಂದು ನೆನೆದು ದುಃಖಿಸುತ್ತಿದ್ದಾರೆ. ಆದುದರಿಂದ ಅವರು ನನ್ನೊಂದಿಗೆ ಹೇಳಿದ್ದಾರೆ: ಅವನ ಬಳಿಗೆ ಹೋಗಿ ನಾನು ಬದುಕಿರುವಾಗಲೇ ಯಾವುದಾದರೂ ಉದ್ಯೋಗ ಮಾಡಲು ಹೇಳಿರಿ ಎಂದು ಹೇಳಿದ್ದಾರೆ. ನೀವು ನಿಮ್ಮ ತಂದೆಯವರ ಮಾತನ್ನು ಏಕೆ ಕೇಳುವುದಿಲ್ಲ ಎಂದು ನಾನು ಹೇಳಿದೆ. ಆಗ ಮಿರ್ಝಾ ಸಾಹೇಬರು ಹೇಳಿದರು: ನನ್ನ ತಂದೆಯವರು ಅನಾವಶ್ಯಕವಾಗಿ ದುಃಖಿಸುತ್ತಿದ್ದಾರೆ. ನನ್ನ ಭವಿಷ್ಯತ್ತಿನ ಬಗ್ಗೆ ಅವರೇಕೆ ವ್ಯಾಕುಲಚಿತ್ತರಾಗಿದ್ದಾರೆ. ನಾನು ಯಾರ ಬಳಿ ನೌಕರಿ ಮಾಡಬೇಕಾಗಿತ್ತೋ ಅವನ ಬಳಿ ನೌಕರಿ ಮಾಡುತ್ತಿದ್ದೇನೆ."

ಅನಂತರ ಆ ಸಿಖ್ ಹೀಗೆ ಹೇಳಿದರು: ನಾನು ಮಿರ್ಝಾ ಸಾಹೇಬರ ತಂದೆ ಮಿರ್ಝಾ ಗುಲಾಮ್ ಮುರ್ತಝಾ ಸಾಹೇಬರ ಬಳಿಗೆ ಹೋಗಿ ಎಲ್ಲವನ್ನೂ ವಿವರಿಸಿ ಹೇಳಿದೆ. ಆಗ ಅವರು ಹೇಳಿದರು: ಅವನು ಆ ರೀತಿ ಹೇಳಿದ್ದರೆ ಒಳ್ಳೆಯದೇ ಆಯಿತು. ಅವನು ಸುಳ್ಳು ಹೇಳುವುದಿಲ್ಲ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಇದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆರಂಭದ ಸಿತ್ಥಿಯಾಗಿದೆ. ಇನ್ನೂ ಅಂತಿಮ ಸ್ಥಿತಿಗೆ ತಲಪಿಲ್ಲ. ಆದರೆ ತಾತ್ಕಾಲಿಕವಾದ ಅಂತಿಮ ಸ್ಥಿತಿ ಸಹ ಹೇಗಿತ್ತೆಂದರೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮೃತರಾದ ಕಾಲದಲ್ಲಿ ಸಾವಿರಾರು ಜನರು ಅವರಿಗೋಸ್ಕರ ಜೀವಾರ್ಪಣೆ ಮಾಡಲು ಸಿದ್ಧರಾಗಿದ್ದರು. ಖಾದಿಯಾನಿನ ಅವರ ಲಂಗರ್‌ಖಾನದಲ್ಲಿ ಪ್ರತಿದಿನ ಆ ಕಾಲದಲ್ಲಿ ಇನ್ನೂರು – ಇನ್ನೂರೈವತ್ತು ಜನರು ಊಟ ಮಾಡುತ್ತಿದ್ದರು. ಆರಂಭದ ಕಾಲದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಭೇಟಿಯಾಗಲು ಯಾರಾದರು ಬಂದರೆ ಊಟ ತರಲು ತನ್ನ ಅಣ್ಣನ ಪತ್ನಿಯೊಂದಿಗೆ ಆವಶ್ಯಪಟ್ಟರೆ ಆಕೆ, ಅವನು ಸ್ವತಃ ಕೆಲಸ ಮಾಡದೆ ಬಿಟ್ಟಿ ತಿನ್ನುತ್ತಿದ್ದಾನೆ ಎಂದು ಹೇಳುತ್ತಿದ್ದರು.. ಆಕೆ ಅತಿಥಿಗೆ ಆಹಾರ ಕಳುಹಿಸದೆ ಇದ್ದಾಗ ಅವರು ಸ್ವತಃ ತಮ್ಮ ಆಹಾರವನ್ನು ಅತಿಥಿಗೆ ನೀಡಿ ತಾನು ಹಸಿದಿರುತ್ತಿದ್ದರು ಅಥವಾ ಸ್ವಲ್ಪ ಕಡಲೆ ತಿನ್ನುತ್ತಿದ್ದರು.

ಆದರೆ, ಅಲ್ಲಾಹನ ಅದ್ಭುತ ದೃಷ್ಟಾಂತ ನೋಡಿರಿ, "ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ತಾತ್ಸಾರ ಭಾವದಿಂದ ಕಾಣುತ್ತಿದ್ದ ಆಕೆ ನನ್ನ ಕೈಯಲ್ಲಿ ಬೈಅತ್ ಮಾಡಿದರು" ಎಂದು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ.

ಒಟ್ಟಾರೆ ಹೇಳುವುದಾದರೆ ಅಲ್ಲಾಹನ ಕಡೆಯಿಂದ ಒಂದು ಕೆಲಸ ಪ್ರಾರಂಭಿಸಲ್ಪಟ್ಟರೆ ಅದರ ಆರಂಭ ದೊಡ್ಡದಾಗಿ ಕಾಣಿಸುವುದಿಲ್ಲ. ಆದರೆ ಅದರ ಅಂತಿಮ ಸ್ಥಿತಿಯನ್ನು ಕಂಡು ಲೋಕವು ಆಶ್ಚರ್ಯಗೊಳ್ಳುತ್ತದೆ. ಈಗ ನಾವು ನೋಡುತ್ತೇವೆ. ಖಾದಿಯಾನಿನಲ್ಲಿ ಮಾತ್ರವಲ್ಲ ಖಾದಿಯಾನಿನ ಹೊರಗೆ ಸಹ ಅನೇಕ ದೇಶಗಳಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಲಂಗರ್‌ಖಾನಗಳು ಜಾರಿಯಲ್ಲಿವೆ. ಆರಂಭದ ಕಾಲದಲ್ಲಿ ಎರಡು ಮೂರು ಒಲೆಗಳಲ್ಲಿ ರೊಟ್ಟಿ ಬೇಯಿಸಲ್ಪಡುತ್ತಿದ್ದಿದು, ಇಂದು ನಮ್ಮ ಲಂಗರ್‌ಗಳಲ್ಲಿ ರೊಟ್ಟಿ ತಯಾರಿಸುವ ಯಂತ್ರಗಳಿವೆ. ಖಾದಿಯಾನಿನಲ್ಲೂ ರಬ್ವದಲ್ಲೂ ಇಲ್ಲಿಯೂ ಲಕ್ಷಾಂತರ ರೊಟ್ಟಿಗಳನ್ನು ತಯಾರಿಸಲಾಗುತ್ತಿದೆ.

ಹಿಂದೆ ಎಂತಹ ಕಾಲವಾಗಿತ್ತು. ಒಬ್ಬ ಅತಿಥಿ ಬಂದಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಆಹಾರ ಅತಿಥಿಗೆ ಕೊಟ್ಟು ತಾನು ಹಸಿದಿರುತ್ತಿದ್ದರು. ಇಂದು ವಿವಿಧ ದೇಶಗಳಲ್ಲಿ ಸಾವಿರಾರು ಜನರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಊಟದ ಮನೆಗಳಿಂದ ಆಹಾರ ತಿನ್ನುತ್ತಿದ್ದಾರೆ. ಇದು ಸಹ ಅಂತಿಮ ಘಟ್ಟ ಎಂದು ಹೇಳಲು ಸಾಧ್ಯವಿಲ್ಲ. ಈಗ ಇದು ಪ್ರಪಂಚದ ಇನ್ನೂ ಅನೇಕ ದೇಶಗಳಿಗೆ ವ್ಯಾಪಿಸಲಿಕ್ಕಿದೆ. ಇನ್‌ಶಾಅಲ್ಲಾಹ್ – ಲಕ್ಷಾಂತರ, ಕೋಟ್ಯಾಂತರ ಜನರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಈ ಲಂಗರ್‌ನಿಂದ ಆಹಾರ ಸೇವಿಸಲಿದ್ದಾರೆ. ಇದೇ ರೀತಿ ಲಕ್ಷಾಂತರ, ಕೋಟ್ಯಾಂತರ ಜನರು ಅವರನ್ನು ನಂಬಿದ ನಂತರ ತಖ್ವದಲ್ಲಿ ಅಭಿವೃದ್ಧಿಗಳಿಸಲಿದ್ದಾರೆ. ಇಂದು ಲೌಕಿಕ ಏರ್ಪಾಟುಗಳಲ್ಲಿರುವ ಅಹ್ಮದೀಯರಲ್ಲಿ ಏನೊಂದು ತ್ಯಾಗ ಮನೋಭಾವವನ್ನು ನಾವು ಕಾಣುತ್ತಿರುವೆವೋ ಅದು ಸಹ ಪರಮೋನ್ನತ ಸ್ಥಿತಿಯೇನಲ್ಲ. ಇನ್‌ಶಾಅಲ್ಲಾಹ್ ಅದರಲ್ಲೂ ಸಹ ಇನ್ನೂ ಹೆಚ್ಚಿನ ಅಭಿವೃದ್ಧಿ ಉಂಟಾಗಲಿದೆ. ಕೇವಲ ಲಂಗರ್‌ಖಾನದ ವ್ಯವಸ್ಥೆ ಬಗ್ಗೆ ಯಾರಾದರೂ ಚಿಂತಿಸುವವರು ನೋಡುವುದಾದರೆ ಮತ್ತು ಅದನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆರಂಭದ ಸ್ಥಿತಿಯೊಂದಿಗೆ ಹೋಲಿಸಿ ನೋಡುವುದಾದರೆ ಇದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸತ್ಯಸಂಧತೆಗೆ ಒಂದು ದೊಡ್ಡ ದೃಷ್ಟಾಂತವಾಗಿ ಕಾಣಬಹುದಾಗಿದೆ. ಇದು ಬಹಳ

ದೊಡ್ಡ ದೃಷ್ಟಾಂತವಾಗಿದೆ. ಇದು ನಮ್ಮ ವಿಶ್ವಾಸವನ್ನು ನಿಶ್ಚಯವಾಗಿಯೂ ವರ್ಧಿಸುವಂತಹದಾಗಿದೆ. ಈ ಎಲ್ಲ ವ್ಯವಸ್ಥೆಯನ್ನು ಚಲಾಯಿಸಲು ಸಾಂಪತ್ತಿಕ ತ್ಯಾಗ ಮಾಡುವ ಮನೋಭಾವ ನಮ್ಮ ಜಮಾಅತಿನ ಸದಸ್ಯರಲ್ಲಿ ಉಂಟಾದುದು ಸಹ ಅವರ ತಖ್ವದ ಪರಿಣಾಮದಿಂದಲೇ ಆಗಿದೆ. ಅದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಸಂಬಂಧ ಸ್ಥಾಪಿಸಿದ ಕಾರಣ ನಮ್ಮಲ್ಲಿ ಉಂಟಾಗಿದೆ. ನಮ್ಮ ಪೈಕಿ ಪ್ರತಿಯೊಬ್ಬ ವ್ಯಕ್ತಿಗೂ ವಾಸ್ತವಿಕ ತಖ್ವವನ್ನು ತನ್ನಲ್ಲಿ ಉಂಟುಮಾಡುವ ಭಾಗ್ಯ ಅಲ್ಲಾಹನು ದಯಪಾಲಿಸಲಿ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಸಂಬಂಧಿಸಿ ಅನೇಕ ವಿಷಯಗಳನ್ನು ವಿವರಿಸಿ ಅವುಗಳಿಂದ ಸೂಕ್ಷ್ಮ ನಿರೀಕ್ಷೆಗಳನ್ನು ಮಾಡಿದ್ದಾರೆ. ಅವು ನಮ್ಮ ವಿಶ್ವಾಸದ ವರ್ಧನೆಗೆ ಮತ್ತು ಜ್ಞಾನ ವರ್ಧನೆಗೆ ಸಹಾಯಕವಾಗಿವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಊಟ ಮಾಡುವ ರೀತಿ ಹೇಗೆ ಇತ್ತು ಎನ್ನುವ ಬಗ್ಗೆ ಹೀಗೆ ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಊಟ ಮಾಡುತ್ತಿದ್ದ ವಿಧಾನ ಅಪೂರ್ವವಾಗಿತ್ತು. ಆ ರೀತಿ ಯಾರನ್ನೂ ನಾನು ಕಂಡಿಲ್ಲ. ಅವರು ರೊಟ್ಟಿಯನ್ನು ಮೊದಲು ಬೆರಳಿನಿಂದ ತುಂಡು ತುಂಡು ಮಾಡುತ್ತಿದ್ದರು. ಆಗ ಅವರು **ಸುಬ್‌ಹಾನಲ್ಲಾಹ್, ಸುಬ್‌ಹಾನಲ್ಲಾಹ್** ಎಂದು ಉಚ್ಚರಿಸುತ್ತಿದ್ದರು. ಅನಂತರ ಅದರಿಂದ ಒಂದು ಚಿಕ್ಕ ತುಂಡು ರೊಟ್ಟಿಯನ್ನು ಸಾರಿಗೆ ತಗಲಿಸಿ ಬಾಯಿಗೆ ಹಾಕುತ್ತಿದ್ದರು. ಅವರ ಈ ಸ್ವಭಾವ ನೋಡಿ ಕೆಲವರು ಹೀಗೆ ಯೋಚಿಸುತ್ತಿದ್ದರು: ಪ್ರಾಯಶಃ ಅವರು ರೊಟ್ಟಿಯ ಹಲಾಲ್ ಭಾಗವನ್ನು ಹುಡುಕುತ್ತಿದ್ದಾರೆ ಎಂದು. ಆದರೆ ಅವರು ಹಾಗೆ ಮಾಡುತ್ತಿದ್ದುದರ ಮೂಲ ಕಾರಣ ಇದಾಗಿತ್ತು- ಅಲ್ಲಾಹನ ಧರ್ಮ ವಿಪತ್ತಿಗೆ ಗುರಿಯಾಗಿರುವಾಗ ನಾವು ಊಟ ಮಾಡುತ್ತಿದ್ದೇವೆ ಎಂಬ ಭಾವನೆಯಾಗಿತ್ತು. ಪ್ರತಿಯೊಂದು ತುತ್ತು ನುಂಗುವಾಗ ಅವರ ಗಂಟಲಲ್ಲಿ ಸಿಲುಕುತ್ತಿತ್ತು. ಅವರು **ಸುಬ್‌ಹಾನಲ್ಲಾಹ್, ಸುಬ್‌ಹಾನಲ್ಲಾಹ್** ಎಂದು ಹೇಳಿ ಅಲ್ಲಾಹನಿಂದ ಕ್ಷಮೆಯಾಚಿಸುತ್ತಿದ್ದರು. ಊಟ ಮಾಡಬೇಕಾದುದು ಮನುಷ್ಯನಿಗೆ ಅನಿವಾರ್ಯವಾದುದರಿಂದ ನಾವು ತಿನ್ನುತ್ತೇವೆ. ಇಲ್ಲವಾಗಿದ್ದರೆ, ಇಸ್ಲಾಂ ಧರ್ಮವು ಆಪತ್ತಿನಲ್ಲಿ ಸಿಲುಕಿರುವ ಈ ಕಾಲದಲ್ಲಿ ಖಂಡಿತ ಇದು ನಮಗೆ ಸೇರುತ್ತಿರಲಿಲ್ಲ ಎಂದು ಅವರು ಹೇಳುವಂತಿತ್ತು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಊಟ ಮಾಡುತ್ತಿದ್ದುದು ಸಹ ಒಂದು ಯುದ್ಧದ ಹಾಗೆ ಭಾಸವಾಗುತ್ತಿತ್ತು. ಇಸ್ಲಾಮ್ ಧರ್ಮದ ಸೇವೆ ಮಾಡಲು ಉಕ್ಕುವ ಸೂಕ್ಷ್ಮ ಭಾವಾವೇಶಗಳು ಮತ್ತು ಅಲ್ಲಾಹನು ವಿಧಿಸಿದ ಪ್ರಕೃತಿ ನಿಯಮಗಳ ಮಧ್ಯೆ ಅದೊಂದು ಸಂಘರ್ಷದಂತೆ ಇತ್ತು. ಊಟ ಮಾಡಬೇಕಾದುದು ಒಂದು ಅನಿವಾರ್ಯತೆಯಾಗಿದೆ. ಆದರೆ, ಅವರಿಗಿದ್ದ ಮುಖ್ಯ ಚಿಂತೆ ಇಸ್ಲಾಮ್ ಧರ್ಮದ ಅಭಿವೃದ್ಧಿ ಮತ್ತು ಅದರ ಸೇವೆಯಾಗಿತ್ತು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಈ ಉದಾಹರಣೆ ಈ ವಿಷಯದ ಕಡೆಗೆ ಗಮನಹರಿಸುವಂತೆ ನಮ್ಮನ್ನು ಮಾಡುತ್ತಿದೆ. ನಾವು ಅಲ್ಲಾಹನ ಅನುಗ್ರಹಗಳನ್ನು ಉಪಯೋಗಿಸುವಾಗ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುತ್ತಾ ಇರಬೇಕು. ಅಲ್ಲಾಹನ ತಸ್‌ಬೀಹ್ ಮಾಡುವುದರೊಂದಿಗೆ ಧರ್ಮದ ಇಂದಿನ ಸ್ಥಿತಿಯ ಬಗ್ಗೆ ನೋವನ್ನೂ ಹೊಂದಬೇಕು. ಧರ್ಮ ಪ್ರಚಾರದಲ್ಲಿ ನಾವು ಹೇಗೆ ಭಾಗವಹಿಸಬಹುದೆಂದು ಚಿಂತಿಸಿ ಪ್ರಯತ್ನಿಸಬೇಕು. ಊಟ ಮಾಡುವಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತಸ್‌ಬೀಹ್ ಮಾಡುತ್ತಿದ್ದುದರ ಬಗ್ಗೆ ಪವಿತ್ರ ಖುರ್‌ಆನಿನ ವಚನ **ಯುಸಬ್ಬಿಹು ಲಹೂ ಮಾಫಿಸ್ಸಮಾವಾತಿ ವಮಾಫಿಲ್ ಅರ್‌ಝಿ** ಇನ್ನಷ್ಟು ವಿಶದೀಕರಿಸಲ್ಪಡುತ್ತದೆ. ಭೂಮ್ಯಾಕಾಶಗಳಲ್ಲಿರುವ ಪ್ರತಿಯೊಂದು ವಸ್ತು ಅಲ್ಲಾಹನ ತಸ್‌ಬೀಹ್ ಮಾಡುತ್ತದೆ ಎಂದು ಪವಿತ್ರ ಖುರ್‌ಆನ್ ಹೇಳಿದುದನ್ನು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ವಿವರಿಸಿದ್ದಾರೆ:

ಅಲ್ಲಾಹನು ಹೀಗೆ ಹೇಳಿದುದರ ಅರ್ಥ ನೀವು ಆ ತಸ್‌ಬೀಹನ್ನು ಆಲಿಸಿರಿ ಎಂದಾಗಿದೆ. ಈ ತಸ್‌ಬೀಹ್ ಆಲಿಸಲು ನಮಗೆ ಸಾಧ್ಯ ಎಂದು ಸೂಚಿಸಲಾಗಿದೆ. ಒಂದು ಕೆಳಮಟ್ಟದ ಆಲಿಸುವಿಕೆ, ಇನ್ನೊಂದು ಉನ್ನತ ಮಟ್ಟದ ಆಲಿಸುವಿಕೆ. ಉನ್ನತ ಮಟ್ಟದಲ್ಲಿ ಆಲಿಸಲು ಅಂತಹ ಕಣ್ಣು ಮತ್ತು ಕಿವಿಗಳಿರಬೇಕು. ಇದೇ ಕಾರಣದಿಂದ ಸತ್ಯವಿಶ್ವಾಸಿಗಳೊಂದಿಗೆ ಹೀಗೆ ಹೇಳಲಾಗಿದೆ- ಊಟ ಮಾಡುವ ಮೊದಲು **ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಮ್** ಎಂದೂ ಊಟ ಮಾಡಿದ ನಂತರ **ಅಲ್‌ಹಮ್‌ದುಲಿಲ್ಲಾಹ್** ಎಂದು ಹೇಳಬೇಕು. ಬಟ್ಟೆ ಧರಿಸುವಾಗ ಮತ್ತು ದೃಶ್ಯಗಳನ್ನು ಕಾಣುವಾಗ ಸಹ ಅವುಗಳಿಗುಣವಾದ ತಸ್‌ಬೀಹ್ ಮಾಡಬೇಕು. ಸತ್ಯವಿಶ್ವಾಸಿಯು ಮಾಡುವ ತಸ್‌ಬೀಹ್ ಆ ವಸ್ತುಗಳು ಮಾಡುವ ತಸ್‌ಬೀಹನ್ನು ಸತ್ಯಪಡಿಸುತ್ತದೆಯೋ ಎಂಬಂತಿರುತ್ತದೆ. ಬಟ್ಟೆಯ ತಸ್‌ಬೀಹ್, ಊಟದ ತಸ್‌ಬೀಹ್ ಮತ್ತು ಇತರ ವಸ್ತುಗಳ ತಸ್‌ಬೀಹ್‌ಗಳನ್ನು ಸತ್ಯವಿಶ್ವಾಸಿಯ ತಸ್‌ಬೀಹ್ ಸತ್ಯಪಡಿಸುತ್ತದೆ.

ಮನುಷ್ಯನು ಊಟ ಮಾಡಲು ಪ್ರಾರಂಭಿಸುವಾಗ **ಬಿಸ್ಮಿಲ್ಲಾಹ್** ಎಂದು ಹೇಳುತ್ತಾನೆ. ಊಟ ಮುಗಿಸಿ **ಅಲ್‌ಹಮ್‌ದುಲಿಲ್ಲಾಹ್** ಎಂದು ಹೇಳುತ್ತಾನೆ. ಬಟ್ಟೆ ಧರಿಸುವಾಗ ಪ್ರಾರ್ಥನೆ ಮಾಡುತ್ತಾನೆ. ಅಲ್ಲಾಹನನ್ನು ಸ್ಮರಿಸುತ್ತಾನೆ. ಇವುಗಳೆನ್ನೆಲ್ಲಾ ಮನುಷ್ಯನು ಮಾಡುತ್ತಾನೆ. ವಾಸ್ತವಿಕವಾಗಿ ಈ ತಸ್‌ಬೀಹ್‌ಗಳು ಆ ವಸ್ತುಗಳ ಕಡೆಯಿಂದ ಆಗುತ್ತವೆ. ಅವುಗಳನ್ನು ನೋಡಿ ಮನುಷ್ಯನು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುವಾಗ ತಸ್‌ಬೀಹ್ ಆ ವಸ್ತುಗಳ ಕಡೆಯಿಂದಲೂ ಆಗುತ್ತದೆ. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: "ಎಷ್ಟು ಜನರಿದ್ದಾರೆ ತಸ್‌ಬೀಹ್ ಮಾಡುವವರು? ರಾತ್ರಿ ಹಗಲು

ತಿನ್ನುತ್ತಾರೆ, ಕುಡಿಯುತ್ತಾರೆ. ಪರ್ವತಗಳ ಮೂಲಕ ದಾಟಿಹೋಗುತ್ತಾರೆ. ನದಿಗಳನ್ನು ನೋಡುತ್ತಾರೆ. ಹಚ್ಚಹಸಿರನ್ನು ಕಾಣುತ್ತಾರೆ. ಮರಗಳನ್ನೂ ಹೊಲಗಳನ್ನೂ ಸಮೃದ್ಧಿ ಹೊಂದಿ ಕಾಣುತ್ತಾರೆ. ಪಕ್ಷಿಗಳ ಚೀರಾಟ ಆಲಿಸುತ್ತಾರೆ. ಆದರೆ ಅವರ ಹೃದಯಗಳಲ್ಲಿ ಯಾವುದಾದರೂ ಪ್ರಭಾವ ಉಂಟಾಗುತ್ತದೆಯೇ? ಅವುಗಳನ್ನು ನೋಡುವಾಗ ಅವರ ಹೃದಯಗಳಲ್ಲಿ ತಸ್‌ಬೀಹ್ ಹುಟ್ಟುತ್ತದೆಯೋ? ಆದುದರಿಂದ ಯಾವುದಾದರೂ ವಸ್ತುವಿನ ಬಗ್ಗೆ ಮನುಷ್ಯನು ಹೊಂದುವ ಕೃತಜ್ಞತಾ ಭಾವನೆ, ಅಲ್ಲಾಹನ ಶಕ್ತಿಸಾಮರ್ಥ್ಯ ಕಂಡು ಸುಬ್‌ಹಾನಲ್ಲಾಹ್ ಎಂದು ಹೇಳುವಾಗ ವಾಸ್ತವಿಕವಾಗಿ ಅದು ಆ ವಸ್ತುಗಳ ತಸ್‌ಬೀಹ್ ಆಗಿರುತ್ತದೆ. ಅದರ ಪ್ರಕಟಣೆ ಮನುಷ್ಯನ ಬಾಯಿಯಿಂದ ಆಗುತ್ತದೆ ಅಷ್ಟೆ. ಈ ಸೂಕ್ಷ್ಮಾಂಶವನ್ನು ಮನವರಿಕೆ ಮಾಡಿಕೊಳ್ಳುವ ಆವಶ್ಯಕತೆ ಇದೆ. ಈ ರೀತಿಯ ತಸ್‌ಬೀಹನ್ನು ಮಾಡಲು ನಾವು ಪ್ರಯತ್ನಿಸಬೇಕು. ಈ ರೀತಿಯ ತಸ್‌ಬೀಹ್ ನಮ್ಮ ನಿತ್ಯ ಕರ್ಮವಾಗುವುದೇ ತಕ್ಕ ಆಗಿದೆ.''

ಈ ಕಾಲಘಟ್ಟದಲ್ಲಿ ಇಸ್ಲಾಮನ್ನು ಆಕ್ರಮಿಸುವವರ ಬಾಯಿ ಮುಚ್ಚಿಸಲು ಮತ್ತು ಇಸ್ಲಾಮಿನ ಸೌಂದರ್ಯವನ್ನು ಪ್ರಕಟಗೊಳಿಸಲು ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಕಳುಹಿಸಿರುವನು. ಇದಕ್ಕೆ ಸಂಬಂಧಿಸಿ ಒಂದು ಘಟನೆಯನ್ನು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ವಿವರಿಸುತ್ತಾರೆ: ''ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮಸ್‌ಜಿದ್‌ನಲ್ಲಿ ಕುಳಿತಿದ್ದಾಗ ಒಬ್ಬ ಕ್ರೈಸ್ತ ವಿಶ್ವಾಸಿ ಬಂದು ಹೇಳಿದನು- ಪವಿತ್ರ ಖುರ್‌ಆನಿನ ಅರಬಿ ಭಾಷೆ ಉಮ್ಮುಲ್ ಅಲ್‌ಸಿನ (ಭಾಷೆಗಳ ಮಾತೆ) ಎಂದು ನೀವು ಹೇಳುತ್ತಿರುವಿರಿ. ಆದರೆ ಮ್ಯಾಕ್ಸ್ ಮುಲ್ಲರ್ ನಂತಹ ಭಾಷಾ ಪಂಡಿತರು ಹೇಳುತ್ತಾರೆ ಭಾಷೆಗಳ ಮಾತೆಯಾಗಿರಬೇಕಾದರೆ ಅದು ಸಂಕ್ಷಿಪ್ತವಾಗಿರಬೇಕು ಎಂದು ಹೇಳಿದರು. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ನಾವು ಮ್ಯಾಕ್ಸ್ ಮುಲ್ಲರನ ಈ ಸೂತ್ರವನ್ನಂತೂ ಅಂಗೀಕರಿಸುವುದಿಲ್ಲ. ಆದರೆ ಈಗ ನಾವು ವಾದಪ್ರತಿವಾದವನ್ನು ಸಂಕ್ಷಿಪ್ತಗೊಳಿಸಲಿಕ್ಕಾಗಿ ಈ ಅಭಿಪ್ರಾಯ ಪ್ರಕಾರ ಅರಬಿ ಭಾಷೆಯನ್ನು ಪರಿಶೋಧಿಸುವ ಎಂದು ಹೇಳಿದರು. ಆ ವ್ಯಕ್ತಿ ಇಂಗ್ಲಿಷ್ ಭಾಷೆಯನ್ನು ಅರಬಿ ಭಾಷೆಗಿಂತ ಉನ್ನತವಾದುದು ಎಂದು ಸಹ ಹೇಳಿದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇಂಗ್ಲಿಷ್ ಭಾಷೆ ಕಲಿತಿರಲಿಲ್ಲ. ಆದರೆ ಅಲ್ಲಾಹನು ಅವರ ನಾಲಗೆಯಲ್ಲಿ ಇಂಗ್ಲಿಷ್ ಶಬ್ದಗಳನ್ನು ನುಡಿಸಿ ಆಕ್ಷೇಪಗಾರ ಗಾಬರಿಗೊಳ್ಳುವಂತೆ ಮಾಡಿದನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಕೇಳಿದರು: ಇಂಗ್ಲಿಷ್‌ನಲ್ಲಿ ''ನನ್ನ ನೀರು'' ಎಂಬುದನ್ನು ಯಾವ ರೀತಿಯಲ್ಲಿ ಹೇಳಲಾಗುತ್ತದೆ. ಆಗ ಅವನು ಹೇಳಿದನು- 'ಮೈ ವಾಟರ್'. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು- ಅರಬಿಯಲ್ಲಿ ಮಾಯಿ ಎಂದರೆ ಸಾಕು. ಈಗ ನೀವು ಹೇಳಿರಿ ಮೈ ವಾಟರ್ ಸಂಕ್ಷಿಪ್ತವೋ ಮಾಯಿ ಸಂಕ್ಷಿಪ್ತವೋ ಎಂದು. ಅವನು ನಾಚಿಕೆಗೊಂಡನು. ನಿರುತ್ತರನಾದನು. ಅರಬಿ ಭಾಷೆಯು ಬಹಳ ಸಂಕ್ಷಿಪ್ತವಾಗಿದೆ ಎಂದು ಆತ ಒಪ್ಪಿಕೊಂಡನು.

ಅಲ್ಲಾಹನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ವಾಗ್ದಾನ ಮಾಡಿದ್ದನು- ಶತ್ರುಗಳ ಆಕ್ರಮಣದಿಂದ ನಿನ್ನನ್ನು ನಾನು ರಕ್ಷಿಸುವೆನು ಎಂದು. ಶತ್ರುಗಳು ಖಡ್ಗದಿಂದ ಆಕ್ರಮಣ ಮಾಡಿದಾಗ ಅಲ್ಲಾಹನು ಅವರ ಖಡ್ಗಗಳನ್ನು ಮೊಂಡು ಗೊಳಿಸಿದನು. ಅವರ ಖಡ್ಗಗಳು ಮುರಿದು ಬಿದ್ದುವು. ಶತ್ರುಗಳು ಚರಿತ್ರೆಯ ಮೂಲಕ ಆಕ್ರಮಣ ಮಾಡಿದಾಗ ಎಂತಹ ಮುಸ್ಲಿಮರು ಎದ್ದು ನಿಂತರೆಂದರೆ ಅವರು ಚರಿತ್ರೆಯ ಪುಸ್ತಕಗಳನ್ನು ಪರಿಶೋಧಿಸಿ ಶತ್ರುಗಳ ಆಕ್ಷೇಪಗಳನ್ನು ರದ್ದುಗೊಳಿಸಿದರು. ಶತ್ರುಗಳಿಗೆ ಅವರದೇ ಗ್ರಂಥಗಳನ್ನು ತೆರೆದು ತೋರಿಸಿದರು. ಅವರು ಇಸ್ಲಾಮ್ ವಿರುದ್ಧ ಮಾಡುವ ಆಕ್ಷೇಪ ಅವರ ಸ್ವಂತ ಧರ್ಮಗಳ ವಿರುದ್ಧ ಸಹ ಬೀಳುತ್ತದೆ ಎಂದು ನಿರೂಪಿಸಿದರು. ಪವಿತ್ರ ಖುರ್‌ಆನ್ ಮತ್ತು ಹದೀಸುಗಳ ವಿರುದ್ಧ ಮಾಡಲಾದ ಆಕ್ಷೇಪಗಳನ್ನು ಸ್ವತಃ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪರಿಹರಿಸಿದರು.

ಇಂದು ಸಹ ಜನರು ಇಸ್ಲಾಮ್ ವಿರುದ್ಧ ಆಕ್ಷೇಪ ಮಾಡುತ್ತಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗ್ರಂಥಗಳ ಸಹಾಯದಿಂದ ನಾವು ಅವರ ಬಾಯಿ ಮುಚ್ಚಿಸಲು ಸಾಧ್ಯವಿದೆ. ಅದರ ಬಗ್ಗೆ ನಾವು ಗಮನಿಸಬೇಕು. ಅಲ್ಲಾಹನು ತನ್ನ ಧರ್ಮಕ್ಕೆ ಬೆಂಬಲವಾಗಿ ದೃಷ್ಟಾಂತಗಳನ್ನು ತೋರಿಸುತ್ತಾನೆ. ಮತ್ತು ಸಾಕ್ಷ್ಯಾಧಾರಗಳನ್ನು ಒದಗಿಸುತ್ತಾನೆ. ಜ್ಞಾನ ಪ್ರಿಯರ ಹೃದಯಗಳನ್ನು ಅಲ್ಲಾಹನು ಇನ್ನಷ್ಟು ತೆರೆಯುತ್ತಾನೆ. ಆದರೆ ಕೆಲವರು ಕಡಿಮೆ ಜ್ಞಾನ ಹೊಂದಿದ್ದರೂ ವಿದ್ವಾಂಸರೆಂದು ಕರೆಸಿಕೊಳ್ಳಲು ಅನಾವಶ್ಯಕ ಮಾತುಗಳನ್ನು ಹೇಳುತ್ತಾರೆ. ಅವರ ಕಾರಣದಿಂದ ಕೆಲವು ಸಾರಿ ಕಷ್ಟವಾಗುತ್ತದೆ. ವಿರೋಧಿಗಳಿಗೆ ಪರಿಹಾಸ ಮಾಡಲು ಸಂದರ್ಭ ಸಿಗುತ್ತದೆ. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಇಂತಹ ಜನರು ಮಿತಿಮೀರಿ ವರ್ತಿಸುವವರಾಗಿದ್ದಾರೆ. ಅವರು ಮಧ್ಯಮ ಮಾರ್ಗ ಅವಲಂಬಿಸುವುದು ಸೂಕ್ತವಾಗಿದೆ. ಮನುಷ್ಯನು ಬದಲಾವಣೆ ಅಂಗೀಕರಿಸಲು ಸಿದ್ಧನಾಗಬೇಕು. ಆದರೆ ಬದಲಾವಣೆ ಮಾಡಬಲ್ಲವನು ಅಲ್ಲಾಹನು ಮಾತ್ರ. ಅವನು ಬದಲಾವಣೆಯನ್ನು ಇಚ್ಛಿಸುವಾಗ ಲೋಕಕ್ಕೆ ಅದನ್ನು ತಡೆಯಲು ಸಾಧ್ಯವಾಗದು.

ಕೆಲವು ಜನರು ತಪ್ಪು ಭಾವನೆ ಹೊಂದುವ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲದಲ್ಲಿ ಒಬ್ಬ ವ್ಯಕ್ತಿ ಖಾದಿಯಾನಿಗೆ ಬಂದನು. ಅವನು ಹೇಳಿದನು- ಮಿರ್ಝಾ ಸಾಹೇಬರು ನಾನು, ಇಬ್ರಾಹೀಮ್, ನೂಹ್, ಮೂಸಾ,

ಈಸಾ, ಮುಹಮ್ಮದ್ ಎಂದೆಲ್ಲಾ ಹೇಳುತ್ತಾರೆ. ನನ್ನೊಂದಿಗೆ ಸಹ ಅಲ್ಲಾಹನು ಯಾವಾಗಲೂ "ನೀನು ಮುಹಮ್ಮದ್" ಎಂದು ಹೇಳುತ್ತಾನೆ. ಜನರು ಆ ವ್ಯಕ್ತಿಗೆ ಬುದ್ಧಿ ಹೇಳಿದರೂ ಅದು ಪರಿಣಾಮ ಬೀರಲಿಲ್ಲ. ಅವನನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮುಂದೆ ತರಲಾಯಿತು. ಅವನು ಹೇಳಿದನು– ಅಲ್ಲಾಹನು ನನ್ನೊಂದಿಗೆ ನೀನು ಮುಹಮ್ಮದ್ ಎಂದು ಹೇಳುತ್ತಾ ಇರುತ್ತಾನೆ. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: "ಅಲ್ಲಾಹನು ನನ್ನನ್ನು 'ನೀನು ಈಸಾ' ಎಂದು ಹೇಳುವಾಗ ನನಗೆ ಈಸಾರವರ ಗುಣಗಳನ್ನು ನೀಡಿರುವನು. 'ನೀನು ಮೂಸಾ' ಎಂದು ಹೇಳಿದಾಗ ಮೂಸಾರವರ ದೃಷ್ಟಾಂತ ನನಗೆ ನೀಡಿದನು. ನಿಮ್ಮೊಂದಿಗೆ ಯಾವಾಗಲೂ 'ನೀನು ಮುಹಮ್ಮದ್' ಎಂದು ಹೇಳುವಾಗ ನಿಮಗೆ ಪವಿತ್ರ ಖುರ್‌ಆನಿನ ವಿಶಿಷ್ಟ ಜ್ಞಾನ ಮತ್ತು ಅರಿವು ನೀಡಿದ್ದಾನೆಯೇ? ಆ ವ್ಯಕ್ತಿ ಹೇಳಿದನು– ಹಾಗೇನೂ ಇಲ್ಲ. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಸತ್ಯವಾದಿ ಮತ್ತು ಸುಳ್ಳು ವಾದಿಗಳ ವ್ಯತ್ಯಾಸ ಇದೇ ಆಗಿದೆ. ಒಬ್ಬನನ್ನು ಇನ್ನೊಬ್ಬ ನಿಜವಾಗಿಯೂ ಅತಿಥಿಯಾಗಿ ಮಾಡಿದರೆ ಅವನಿಗೆ ಊಟ ಬಡಿಸುತ್ತಾನೆ. ಆದರೆ ಯಾರಾದರೂ ಪರಿಹಾಸ ಮಾಡಲು ಅತಿಥಿಯಾಗಿ ಕರೆದರೆ ಅವನ ಮುಂದೆ ಖಾಲಿ ಪಾತ್ರೆಯನ್ನು ಇರಿಸುತ್ತಾನೆ. 'ಇದು ಪಲಾವು, ಬಿರಿಯಾನಿ' ಎಂದು ಹೇಳುತ್ತಾನೆ. ಆದರೆ ಅಲ್ಲಾಹನು ಈ ರೀತಿ ಪರಿಹಾಸ ಮಾಡುವುದಿಲ್ಲ. ಶೈತಾನನು ಪರಿಹಾಸ ಮಾಡುತ್ತಾನೆ. ನಿಮ್ಮನ್ನು ಮುಹಮ್ಮದ್ ಎಂದು ಕರೆದು ನಿಮಗೆ ಪವಿತ್ರ ಖುರ್‌ಆನಿನ ಜ್ಞಾನ ನೀಡಿಲ್ಲವಾದರೆ ನಿಮ್ಮನ್ನು ಹಾಗೆ ಕರೆದವನು ಶೈತಾನ್ ಆಗಿದ್ದಾನೆ."

ಕೆಲವು ಜನರು ಕೆಲವು ಸ್ವಪ್ನಗಳ ಕಾರಣ ತಪ್ಪು ಗ್ರಹಿಕೆಗೆ ಪಾತ್ರರಾಗುತ್ತಾರೆ. ಅವರು ದೊಡ್ಡ ದೊಡ್ಡ ವಾದಗಳನ್ನು ಮಾಡುತ್ತಾರೆ. ವಾಸ್ತವದಲ್ಲಿ ಅಂಥವರು ಶೈತಾನನ ಪ್ರಭಾವಕ್ಕೆ ಒಳಗಾಗಿರುತ್ತಾರೆ. ಅಲ್ಲಾಹನು ಯಾರಿಗಾದರೂ ಏನನ್ನಾದರೂ ಕೊಟ್ಟರೆ ಅದರ ಪ್ರಭಾವವನ್ನೂ ಸಹ ತೋರಿಸುತ್ತಾನೆ. ದೃಷ್ಟಾಂತಗಳನ್ನು ತೋರಿಸುತ್ತಾನೆ. ತನ್ನ ಸಹಾಯ ಪ್ರಕಟಿಸುತ್ತಾನೆ. ಅಲ್ಲಾಹನ ಕೃತಿರೂಪದ ಸಾಕ್ಷ್ಯ ಅವನೊಂದಿಗಿರುತ್ತದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಲ್ಲಿ ನಾವು ಇದನ್ನೇ ಕಂಡೆವು. ಮುಸ್ಲಿಹ್ ಮೌಊದ್ ಬಗ್ಗೆ ಭವಿಷ್ಯವಾಣಿ ಖಲೀಫತುಲ್ ಮಸೀಹ್ ಸಾನಿಯವರಲ್ಲಿ ಈಡೇರಿರುವುದಾಗಿ ನಾವು ಕಂಡೆವು. ಖಿಲಾಫತ್ ಬಗ್ಗೆ ಅವರು ನೀಡಿದ ಶುಭವಾರ್ತೆ ಅಲ್ಲಾಹನ ಕೃತಿರೂಪದ ಸಾಕ್ಷ್ಯದೊಂದಿಗೆ ಈಡೇರಿರುವುದನ್ನೂ ನಾವು ಕಂಡೆವು. ಇವೆಲ್ಲವುಗಳ ಪೂರ್ತೀಕರಣವನ್ನು ನಾವು ಕಂಡಿದ್ದೇವೆ. ಅಲ್ಲಾಹನು ಪ್ರತಿಯೊಬ್ಬ ಅಹ್ಮದಿಯ ವಿಶ್ವಾಸವನ್ನು ದೃಢಪಡಿಸಲಿ. ಈ ವಿಷಯಗಳನ್ನೂ ಮನವರಿಕೆ ಮಾಡುವಂತೆ ಮಾಡಲಿ – ಆಮೀನ್.

(ಖುತುಬದ ಕೊನೆಯಲ್ಲಿ ಹುಝೂರ್, ಅಮತುಲ್ ಬಾರಿ ಸಾಹೇಬ 1–9–2015ರಂದು ಮೃತರಾದ ಬಗ್ಗೆ ತಿಳಿಸಿ ಜನಾಝು ನಮಾಝ್ ಅನುಷ್ಠಿಸುವುದಾಗಿ ತಿಳಿಸಿದರು. ಅವರು ಮಿರ್ಝಾ ಶರೀಫ್ ಅಹ್ಮದ್ ಸಾಹೇಬರ ಪುತ್ರಿಯೂ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸರ ತಂದೆಯ ಸಹೋದರಿ ಸಹ ಆಗಿದ್ದರು.)

--------------*****--------------

***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 04-09-2015.*

**Summarized by** *Majlis Ansarullah Bharat*

***Kannada Translation***: M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon